ಇದಕ್ಕೂ ಮೊದಲಿನ ಸೃಷ್ಟಿ ಪಯಣದಲ್ಲಿ ಹಲವು ಕಲಾಪ್ರಕಾರಗಳ ಮಜಲುಗಳನ್ನು ಅವರು ಸ್ಪರ್ಶಿಸಿ ಬಂದಿದ್ದರು. ನಾಡಿನ ಬಹುತೇಕ ಕಲಾಶಾಲೆಗಳಲ್ಲಿ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಅವರಿಂದ ಮೂಡಿ ಬರುತ್ತಿದ್ದ ಪ್ರಾತ್ಯಕ್ಷಿಕೆಗಳಲ್ಲಿ, ವರ್ಣಚಿತ್ರಕೃತಿಗಳ ಸೃಷ್ಟಿಪ್ರಕ್ರಿಯೆಯೇ ನೋಡುಗರನ್ನು ಬಣ್ಣಗಳ ಭಾವನಾಲೋಕಗಳಿಗೆ ಕರೆದೊಯ್ಯುತಿತ್ತು. ಕ್ಯಾನವಾಸ್‌ನ ಅವಕಾಶ(space)ದ ಮೇಲಿನ ಬಣ್ಣ, ಕುಂಚದ ಬೀಸುಗಳು, ನವ – ಜಾನಪದೀಯ ಅನುಭವ ನೀಡಲೆಂದೇ ಆಟವಾಡುವಂತೆ ಕಾಣುತ್ತಿದ್ದವು. ಬಾದಾಮಿಯ ಸುತ್ತಲಿನ ತೆರೆದ ಅಂಗಡಿಗಳಲ್ಲಿ ಕುಳಿತ – ನಿಂತ ಕಪ್ಪು – ಕಂದು ಜನರ ಬನಶಂಕರಿ ಜಾತ್ರೆಯ ನವರಸ ಲೋಕಗಳ ಜಿಗಿತ/ಕುಣಿತಗಳು ಸಾದೃಶ್ಯಗೊಳ್ಳುತಿದ್ದವು.

ಕಲಿಸುವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಮ್ಮೆದುರಿಗೇ ನೋಡುತ್ತಿದ್ದ ವ್ಯಕ್ತಿ/ದೃಶ್ಯಗಳು ವಿಭಿನ್ನ ಒಳ – ಹೊರ ನೋಟಗಳೊಂದಿಗೆ ರೂಪಾಂತರ /ದೃಶ್ಯಾಂತರಗೊಂಡು ಮೈದಳೆಯುವ ದೃಶ್ಯ ಕುತೂಹಲಗಳು, ಅವರ ಕಲಿಕೆಗೆ ಪೂರಕವಾದ ಆಕರವೇ ಅಲ್ಲದೆ, ಆನಂದದ ಅನುಭೂತಿಯನ್ನೂ ನೀಡುತ್ತಿದ್ದವು. ಮಣಿಯವರ ಪ್ರಿಂಟ್ ಮಾಧ್ಯಮದ ಸೃಷ್ಟಿ ಪ್ರಕ್ರಿಯೆಯಲ್ಲಿ ಅನಿರೀಕ್ಷಿತವಾಗಿ ದಿಢೀರ್ ಆಗಿ ಕಾಣಿಸಿಕೊಳ್ಳುವ ಅಚ್ಚರಿಯ ಪರಿಣಾಮಗಳೂ ಹೆಚ್ಚಾಗಿಯೇ ಇರುತ್ತಿದ್ದವು. ಅತಿ ಆವೇಗ, ಆವೇಶಯುತ ಕ್ರಿಯಾಶೀಲತೆ ಅವರದು. ಹಾಗಾಗಿಯೇ ನೋಡುಗರಿಗೆ ಅದೊಂದು ಬೆರಗಿನ ಅನಾವರಣ. ಭೂದೃಶ್ಯ, ಭಾವಚಿತ್ರಗಳೇ ಅಲ್ಲದೆ ಅಮೂರ್ತ – ಭೂದೃಶ್ಯ ಮತ್ತು ಈ ಮೊದಲೇ ಉಲ್ಲೇಖಿಸಿರುವಂತೆ ಬಾದಾಮಿಯ ಜನರ ಚಿತ್ರಕೃತಿಗಳು ಆ ಅನಾವರಣದ ಬಹುಮುಖ್ಯ ಭೂಮಿಕೆಗಳಾಗಿವೆ. ಅವರ ಅಮೂರ್ತ ಕಲಾ ಸೃಷ್ಟಿಯ ಅಪರೂಪದ ಸಂದರ್ಭಗಳ ಸೊಬಗನ್ನು ನೋಡಿದವರೇ ಬಲ್ಲರು. ಇಡಿಯಾಗಿ ಬಣ್ಣಗಳನ್ನು ಸುರಿಸಿ, ಹರಿಸಿ, ಉಜ್ಜಿ, ಒರೆಸಿ, ತೀಡಿ ತೆಗೆದ, ಮತ್ತೆ ದಟ್ಟವಾಗಿ ಲೇಪಿಸಿದ ಇಂಪೇಸ್ಟೋ ತಂತ್ರದ ದಟ್ಟ ಬಣ್ಣಗಳ ಸಂಯೋಜನೆಗಳು ಅವರವು. ಹೀಗೆ ಮೂಡಿದ ಡಿಜಿಟಲ್ ತಾಂತ್ರಿಕತೆಗೆ ಸಡ್ಡು ಹೊಡೆಯುವ, ಹೊಸ ಹೊಸ ಬಣ್ಣ – ಛಾಯಾಂತರಗಳ ಪ್ರತ್ಯಕ್ಷೀಕರಣವು ಮಾಂತ್ರಿಕಲೋಕವೊಂದರ ಸೃಷ್ಟಿಶೀಲತೆಯೇ ಆಗಿತ್ತು. ಇಲ್ಲೆಲ್ಲ ಮಣಿಯವರು ತಮ್ಮ ಗುರು ಹಡಪದ್‌ರ ಅಕಡೆಮಿಕ್ ಚಿಂತನೆಯ ಮೂಲದ ಸ್ಥಾಪಿತ ಸಿದ್ಧಸೂತ್ರಗಳನ್ನು ಪ್ರಶ್ನಿಸುವಂತೆ, 'ನಾನು ಮಾಡುವುದೇ ಕಲೆ' ಎನ್ನುವ ರೀತಿಯ ಪ್ರಯೋಗಶೀಲ ಸೃಷ್ಟಿ ಪ್ರಕ್ರಿಯೆಯಲ್ಲಿ ತಲ್ಲೀನರಾದವರಂತೆ ಕಾಣುತ್ತಿದ್ದರು. ಕಲಿಸುವ ಸಂದರ್ಭದ ಅವರ ಭೂದೃಶ್ಯ (landscape), ಸ್ಥಿತ ಜೀವ (still life), ಇತ್ಯಾದಿ ಎಲ್ಲ ಪ್ರಕಾರದ ಕೃತಿಗಳು ಹೀಗೆಯೇ ಮೂಡಿ ಬರುತ್ತಿದ್ದವು. ಕಾಲ್ಪನಿಕ ಭೂದೃಶ್ಯಗಳೂ ಆವೇಗಯುತವಾಗಿ ಮೂಡಿ ಬರುತ್ತಿದ್ದವು. ತಮಗೆ ಪೂರಕವಾದ **expressionism, neo – expressionism** ಅಲ್ಲದೆ **abstract expressionism** ಹಾದಿಗಳ



ಜೆ.ಎಂ.ಎಸ್. ಮಣಿ ಅವರ ರೇಖಾಚಿತ್ರ